# ವಿಕಾಸಾತ್ಮಕ ಮನೋವಿಜ್ಞಾನ

**ಇಂದಿರಾ ಜೈಪ್ರಕಾಶ್**

ಮಾನವರಲ್ಲಿ ಗರ್ಭಾವಸ್ಥೆಯಿಂದ ಸಾಯುವವರೆಗೂ ನಡೆಯುವ ಬದಲಾವಣೆ, ವಿಕಾಸಗಳನ್ನು ಅಧ್ಯಯನ ಮಾಡುವುದು ವಿಕಾಸಾತ್ಮಕ ಮನೋವಿಜ್ಞಾನ. ಶಿಶುವಿಜ್ಞಾನ ಎಂದು ಹಿಂದೆ ಶಿಶು, ಮಗು, ಹದಿಹರೆಯದವರನ್ನು ಅಧ್ಯಯನ ಮಾಡುತ್ತಿದ್ದ ಶಾಖೆಯನ್ನು ಪ್ರೌಢ ಮತ್ತು ವೃದ್ಧರ ವಿಷಯಗಳನ್ನೂ ಸೇರಿಸಿ ವಿಕಾಸಾತ್ಮಕ ಎಂದು ನಾಮಕರಣ ಮಾಡಲಾಯಿತು. ಬೆಳೆಯುವ ದೇಹದ ಭೌತಿಕ, ಸಂಜ್ಞಾನಾತ್ಮಕ ಮತ್ತು ಮನೋಸಾಮಜಿಕ ವಿಕಾಸಗಳು ಈ ಶಾಖೆಯ ಕೇಂದ್ರ ವಿಷಯ. ಮಕ್ಕಳು ಪ್ರೌಢರಿಗಿಂತ ಭಿನ್ನ ಎಂದು ಎಲ್ಲರಿಗೂ ಅರಿವಿದೆ. ಇಂತಹ ಭಿನ್ನತೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಗಳನ್ನು ಮಾಡಿದವರು ಪಾಲಕರು. ‘Baby Diary (ಬೇಬಿ ಡೈರಿ)’ ಎಂದು 18ನೆಯ ಶತಮಾನದಲ್ಲೇ ತಂದೆ ತಾಯಿ ತಮ್ಮ ಶಿಶುವಿನ ಬೆಳವಣಿಗೆ ಬಗ್ಗೆ ವರದಿ ಬರೆಯುವ ಅಭ್ಯಾಸವಿತ್ತು. ಜರ್ಮನಿಯ ದಾರ್ಶನಿಕ ಡೀಟ್ರಿಚ್ ಟೀಡ್ಮಾನ್ (Dietrich Tiedemann) 1787 ರಲ್ಲಿ ಬರೆದ ಡೈರಿ ಅಂತಹದರಲ್ಲಿ ಪ್ರಥಮದ್ದಾಗಿತ್ತು. 1882 ರಲ್ಲಿ ವಿಲಿಯಮ್ ಪ್ರೇರ್ (William Preyer) ಆಧುನಿಕ ವಿಕಾಸಾತ್ಮಕ ಮನೋವಿಜ್ಞಾನದ ಮೇಲಿನ ಮೊದಲ ಪಠ್ಯಪುಸ್ತಕ ಎಂದು ಗುರುತಿಸಿಕೊಂಡ “The Mind of the Child (ದ ಮೈಂಡ್ ಆಫ್ ದ ಚೈಲ್ಡ್)” ಎಂಬ ಪುಸ್ತಕವನ್ನು ಪ್ರಕಟಿಸಿದ.

ಝಾನ್-ಝಾಕ್ ರೂಸೋ (Jean-Jacques Rousseau), ಜಾನ್ ಲಾಕ್ (John Locke) ಮತ್ತು ಚಾರ್ಲ್ಸ್ ಡಾರ್ವಿನ್ (Charles Darwin) ಅವರುಗಳು ಪ್ರಸ್ತಾಪಿಸಿದ ಮಾನವ ವರ್ತನೆಯ ಸಿದ್ಧಾಂತಗಳು ಆಧುನಿಕ ವಿಕಾಸಾತ್ಮಕ ಮನೋವಿಜ್ಞಾನಕ್ಕೆ ಪ್ರೇರಕಗಳು ಎನ್ನಲಾಗಿದೆ. ಅಮೇರಿಕಾದಲ್ಲಿ 1891ರಲ್ಲಿ ಸ್ಟ್ಯಾನ್ಲಿ ಹಾಲ್ ಮಗುವಿನ ಮನೋವಿಜ್ಞಾನ ಮತ್ತು ಬೋಧನೆಗೆಂದೇ ಮೀಸಲಿಟ್ಟ ‘Pedagogical Seminary (ಪೆಡಗಾಜಿಕಲ್ ಸೆಮಿನರಿ)’ ಎಂಬ ನಿಯತಕಾಲಿಕವನ್ನು ಪ್ರಾರಂಭಿಸಿದ. 20 ನೆಯ ಶತಮಾನದ ಆದಿಯಲ್ಲಿ ಬುದ್ಧಿಶಕ್ತಿ ಮಾಪನ ಮತ್ತು ಶಿಶು ಮಾರ್ಗದರ್ಶನ ಕೇಂದ್ರಗಳು ಪ್ರಾರಂಭವಾಗಿದ್ದು ಈ ಕ್ಷೇತ್ರದ ಬೆಳವಣಿಗೆಗೆ ಕಾರಣವಾಯಿತು. ಜೇಮ್ಸ್ ಮಾರ್ಕ್ ಬಾಲ್ಡ್ವಿನ್ (James Mark Baldwin) ನ ವಿಕಾಸಾತ್ಮಕ ಮನೋವಿಜ್ಞಾನದಲ್ಲಿನ ಸಂಶೋಧನೆಯು ಮುಂದಿನ ಪೀಳಿಗೆಗೆ ಪ್ರೋತ್ಸಾಹ ನೀಡಿತ್ತು. ಜಾನ್ ಡ್ಯೂಯಿ (John Dewey) ಮಕ್ಕಳ ಶಿಕ್ಷಣದ ವಿಷಯದಲ್ಲಿ ವೈಚಾರಿಕ ಲೇಖನಗಳನ್ನು ಬರೆದಿದ್ದ. ಮುಂದೆ ವೈಗಾಟ್ಸ್ಕಿ (Vygotsky), ಬ್ರಾನ್ಫೆನ್ಬ್ರೆನ್ನರ್ (Bronfenbrenner) ಮುಂತಾದವರು ಮಕ್ಕಳ ಸಾಮಾಜಿಕ ಸಾಂಸ್ಕೃತಿಕ ವಾತಾವರಣವು ಹೇಗೆ ಅವರ ಬೆಳವಣಿಗೆಯನ್ನು ಪ್ರಭಾವಿಸುತ್ತದೆ ಎನ್ನುವುದರ ಬಗ್ಗೆ ಅಧ್ಯಯನ ಮಾಡಿ ವಿಕಾಸಾತ್ಮಕ ಮನೋವಿಜ್ಞಾನಕ್ಕೆ ಮಹತ್ವ ಕೊಡುಗೆ ನೀಡಿದರು.

ಮಕ್ಕಳ ವ್ಯಕ್ತಿತ್ವ ಹೇಗೆ ರಚನೆಯಾಗುತ್ತದೆ ಎನ್ನುವುದರ ಬಗ್ಗೆಯಿರುವ ಮೊದಲ ಸಿದ್ಧಾಂತ ಸಿಗ್ಮಂಡ್ ಫ್ರಾಯ್ಡ್ ನ ಮನೋಲೈಂಗಿಕ ಸಿದ್ಧಾಂತ. ಇದಕ್ಕೆ ವಿರುದ್ಧವಾಗಿ ಎರಿಕ್‌ಸನ್ ಜೀವಮಾನದುದ್ದಕ್ಕೂ ನಡೆಯುವ ಮನೋಸಾಮಾಜಿಕ ವಿಕಾಸದ ಹಂತಗಳನ್ನು ಮುಂದಿಟ್ಟ. ವರ್ತನವಾದದ ಪ್ರಮುಖ ಪ್ರತಿಪಾದಕ ವಾಟ್ಸನ್ ಪರಿಸರವೇ ಎಲ್ಲಾ ವರ್ತನೆಗೆ ಕಾರಣ ಎಂದು ವಾದ ಮಾಡಿದ. ಮಕ್ಕಳ ಸಂಜ್ಞಾನಾತ್ಮಕ ಬೆಳವಣಿಗೆಯನ್ನು ಅಧ್ಯಯನ ಮಾಡಿದ ಕೀರ್ತಿ ಸ್ವಿಸ್ ಮನೋವಿಜ್ಞಾನಿ ಪಿಯಾಝೆ (Piaget) ಯದು. ಕೋಲ್ಬರ್ಗ್(Kohlberg) ಮಕ್ಕಳ ನೈತಿಕ ವಿಕಾಸದ ಸಿದ್ಧಾಂತಕ್ಕೆ ಕಾರಣನಾದನು. ಆರ್ನಾಲ್ಡ್ ಗೆಸೆಲ್(Arnold Gesell) ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಮೇಲೆ ಕ್ರೇಂದ್ರೀಕರಿಸಿ ಪಕ್ವತೆಯ ಸಿದ್ಧಾಂತವನ್ನು ಪ್ರತಿಪಾದಿಸಿದ. ಎಪ್ಪತ್ತರ ದಶಕದಲ್ಲಿ ಬೌಲ್ಬಿ (Bowlby) ಎಂಬುವವನು ಶಿಶು ಮತ್ತು ಪಾಲಕರ ನಡುವಿನ ಬಾಂಧವ್ಯ ಜೀವಕ್ಕೆ ಅಗತ್ಯವಾದ ಸಹಜ ಪ್ರವೃತ್ತಿ ಎಂದು ಮತ್ತು ಶಿಶು ಪಾಲಕರಿಂದ ಬೇರ್ಪಟ್ಟಾಗ ಉಂಟಾಗುವ ಪ್ರತ್ಯೇಕತೆಯ ಆತಂಕದ ಸುತ್ತ ತನ್ನ ಸಿದ್ಧಾಂತವನ್ನು ರೂಪಿಸಿದ. ಹೀಗೆ ಅನೇಕ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಈ ಕ್ಷೇತ್ರ ಬೆಳೆಯಿತು.

ಮಕ್ಕಳ ಸರ್ವತೋನ್ಮುಖ ವಿಕಾಸ ಸಮಾಜಕ್ಕೆ ಅಗತ್ಯವೆಂದು ಮತ್ತು ಮಗು ಬೆಳೆಯುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ವಾತಾವರಣ ಅವರ ಬೆಳವಣಿಗೆಯನ್ನು ಪ್ರಭಾವಿಸುತ್ತದೆ ಎಂಬ ಅರಿವಿರುವುದರಿಂದ ಮಗುವನ್ನು ಅದರ ಸನ್ನಿವೇಶದ ಚೌಕಟ್ಟಿನಲ್ಲಿ ಅಧ್ಯಯನ ಮಾಡುವುದು ಅಗತ್ಯವಾಗುತ್ತದೆ. ಮಕ್ಕಳನ್ನು ಅರ್ಥಮಾಡಿಕೊಳ್ಳಲು ವಿವಿಧ ಮೂಲಗಳು, ಅನೇಕ ವಿಧಾನಗಳು ಹಾಗೂ ಬುದ್ಧಿಶಕ್ತಿ ಮತ್ತು ವ್ಯಕ್ತಿತ್ವ ಮಾಪನಗಳು ಈಗ ಲಭ್ಯವಿವೆ. ಶಿಕ್ಷಕರಿಗೆ, ಸ್ವಲೀನತೆ (autism), ಬುದ್ಧಿಮಾಂದ್ಯತೆ ಮುಂತಾದ ವಿಕಾಸಾತ್ಮಕ ಸಮಸ್ಯೆಗಳನ್ನು ಪತ್ತೆಹಚ್ಚಿ ಸರಿಪಡಿಸಲು ನೈದಾನಿಕ ಮನೋವಿಜ್ಞಾನಿಗಳಿಗೆ, ಮಕ್ಕಳ ವರ್ತನಾ ದೋಷಗಳನ್ನು ಸರಿಪಡಿಸಲು ಮನೋಚಿಕಿತ್ಸಕರಿಗೆ, ಭಾಷಾ ಸಮಸ್ಯೆಯನ್ನು ನಿವಾರಿಸಲು ವಾಕ್ - ಶ್ರವಣ ಚಿಕಿತ್ಸಕರಿಗೆ, ಶಿಶು ಸಂರಕ್ಷಣಾ ಕೇಂದ್ರಗಳಲ್ಲಿ ಸಮಾಜ ಸೇವಕರಿಗೆ, ಮಕ್ಕಳಿಗೆ ನೆರವಾಗುವ ಕಾನೂನು, ಯೋಜನೆ ಸಿದ್ಧಪಡಿಸುವವರಿಗೆ, ಪಾಲಕರಿಗೆ ಮಾರ್ಗದರ್ಶನ ಮಾಡುವವರಿಗೆ, ಹೀಗೆ ಅನೇಕ ವೃತ್ತಿಪರರಿಗೆ ಈ ಶಾಖೆಯ ಜ್ಞಾನ ಮತ್ತು ಮಾಹಿತಿಯನ್ನು ಅನ್ವಯಿಸಲು ನೆರವಾಗುತ್ತದೆ.

ಹದಿಹರೆಯ, ಅಂದರೆ 13 ರಿಂದ 19ರವರೆಗಿನ ವರ್ಷಗಳಲ್ಲಿ ದೇಹದಲ್ಲಿ ವೇಗವಾದ ಬದಲಾವಣೆ ಆಗುವುದಲ್ಲದೆ, ಹರೆಯದವರ ಮಾನಸಿಕ ಮತ್ತು ಸಾಮಾಜಿಕ ಜೀವನದಲ್ಲೂ ಏರುಪೇರು ಉಂಟಾಗುತ್ತದೆ. ಶಿಶು ಮನೋವಿಜ್ಞಾನಕ್ಕಿಂತ ತಡವಾಗಿ ಇದರ ಅಧ್ಯಯನ ಪ್ರಾರಂಭವಾಯಿತು. 15ನೆಯ ಶತಮಾನದಲ್ಲೇ 'ಅದೊಲಶೆರೆ (Adoloscere)' ಎಂದು 'ಬೆಳೆವಣಿಗೆ, ಪಕ್ವವಾಗುವುದು' ಎಂಬ ಅರ್ಥದ ಲ್ಯಾಟಿನ್ ಮೂಲದ ಪದ ಬಳಕೆಯಲ್ಲಿತ್ತು. ಆದರೆ 1904ರಲ್ಲಿ ಸ್ಟ್ಯಾನ್ಲಿ ಹಾಲ್ ಬರೆದ "Adolescence: Its Psychology and its relations to Physiology, Anthropology, Sociology, Sex, Crime, religion, and Education (ಆಡೊಲೆಸನ್ಸ್

ಇಟ್ಸ್ ಸೈಕಾಲಜಿ ಆಂಡ್ ಇಟ್ಸ್ ರಿಲೇಶನ್ ಟು ಫಿಸಿಯಾಲಜಿ, ಆಂತ್ರೊಪಾಲಜಿ, ಸೋಸಿಯಾಲಜಿ, ಸೆಕ್ಸ್, ಕ್ರೈಮ್, ರಿಲಿಜಿಯನ್, ಆಂಡ್ ಎಜುಕೇಶನ್)" ಎಂಬ ಪುಸ್ತಕ ಈ ಕ್ಷೇತ್ರ ಅಧ್ಯಯನದ ಪ್ರಾರಂಭ ಎನ್ನಲಾಗಿದೆ. ಹಾಲ್, ಮನೋಭಾವಗಳ ಅಸ್ತವ್ಯಸ್ತತೆ, ಪಾಲಕರ ಜೊತೆ ಘರ್ಷಣೆ, ಮತ್ತು ಅಪಾಯಕಾರಿ ವರ್ತನೆಯಲ್ಲಿ ತೊಡಗುವುದು ಈ ಹಂತದ ಲಕ್ಷಣ ಎಂದಿದ್ದ. ಮುಂದಿನ ಅತಿ ಮಹತ್ವದ ಕೃತಿ ಪೀಟರ್ ಬ್ಲಾಸ್ (Peter Blos) ಎನ್ನುವವನು 1962ರಲ್ಲಿ ಹೊರತಂದ ಪುಸ್ತಕ "On Adolescence (ಆನ್ ಆಡೊಲೆಸನ್ಸ್)". ಹದಿಹರೆಯದವರ ಬಗ್ಗೆ ವಿಶೇಷವಾಗಿ ಅಧ್ಯಯನ ಮಾಡಿದ್ದರಿಂದ ಇವನು 'ಮಿ. ಆಡೊಲೆಸನ್ಸ್' ಎಂದೇ ಕರೆಯಲ್ಪಟ್ಟಿದ್ದ. ಹದಿಹರೆಯದಲ್ಲಿ ಕುಟುಂಬದ ಮೇಲಿನ ಅವಲಂಬನೆ ಕಳಚಿಕೊಂಡು ಸ್ವತಂತ್ರರಾಗುವುದರಿಂದ ಮಕ್ಕಳ 'ಸ್ವ' ದ ವಿಕಾಸವಾಗುತ್ತದೆ ಎಂದು ಅವನು ವಾದಿಸಿದ್ದ.

ಈ ವಯಸ್ಸಿನಲ್ಲಿ ಇನ್ನೂ ಸಂಜ್ಞಾನಾತ್ಮಕ, ಸಂವೇಗಾತ್ಮಕ ವಿಕಾಸ ಸಂಪೂರ್ಣವಾಗದೆ ಇರುವ ಕಾರಣ ಸಮವಯಸ್ಕರ ಒತ್ತಡ, ಅವರ ಅನುಕರಣೆ, ಸ್ವತಂತ್ರರಾಗುವ ಬಯಕೆ, ಕಟ್ಟುಪಾಡುಗಳ ಬಗ್ಗೆ ಅಸಹನೆ, ಬೆಳೆಯುತ್ತಿರುವ ಲೈಂಗಿಕ ಆಸಕ್ತಿ ಯುವಜನರನ್ನು ಪಾಲಕರೊಡನೆ ಘರ್ಷಣೆಗೆ ತಳ್ಳುತ್ತದೆ. ಇದನ್ನರಿತ ಸಮಾಜಗಳು ಹದಿಹರೆಯದವರಿಗೆಂದು ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು, ಪರಾಮರ್ಶನ ಸಹಾಯ, ಜೀವನ ಕೌಶಲ್ಯ ತರಬೇತಿ, ಯುವ ಸಂಘಗಳು ಮುಂತಾದವುಗಳ ವ್ಯವಸ್ಥೆ ಮಾಡುತ್ತವೆ.

ಪ್ರೌಢತ್ವ (20 ರಿಂದ 40) ತಲುಪುವ ವೇಳೆಗೆ ಬೆಳವಣಿಗೆ ಸಂಪೂರ್ಣಗೊಂಡಿರುತ್ತದೆ. ಈ ಸಮಯದಲ್ಲಿ ದೈಹಿಕ ಸಾಮರ್ಥ್ಯ ಉಚ್ಚ ಮಟ್ಟದಲ್ಲಿರುತ್ತದೆ. 40 ದಾಟಿದ ನಂತರ ನಿಧಾನವಾಗಿ ಚರ್ಮ, ಇಂದ್ರಿಯಗಳ ಸೂಕ್ಷ್ಮತೆ, ಶಕ್ತಿ ಮುಂತಾದವುಗಳಲ್ಲಿ ಇಳಿಮುಖ ಕಾಣತೊಡಗುತ್ತದೆ. ಪ್ರೌಢ ಹಂತದಲ್ಲಿ ವ್ಯಕ್ತಿ ವೃತ್ತಿಯಲ್ಲಿ ನೆಲೆನಿಂತು, ಮದುವೆ, ಸಂಸಾರ ಮುಂತಾದವನ್ನು ನಿಭಾಯಿಸಬೇಕಾಗುತ್ತದೆ. ಅಂತರವ್ಯಕ್ತೀಯ ಸಂಬಂಧಗಳು, ಕೆಲಸದ ಒತ್ತಡ ಮುಂತಾದವು ಈ ವಯಸ್ಸಿನವರಲ್ಲಿ ಕಂಡುಬರುವ ಸಮಸ್ಯೆಗಳು.

ಇಳಿವಯಸ್ಸಿನವರ ಮಾನಸಿಕ, ಸಾಮಾಜಿಕ, ದೈಹಿಕ ಸ್ಥಿತಿಯನ್ನು ಪರೀಕ್ಷಿಸಲು 'ಜರಾಶಾಸ್ತ್ರ (gerontology)' ಎಂಬ ಕ್ಷೇತ್ರ ಹುಟ್ಟಿಕೊಂಡಿತು. 1903 ರಲ್ಲೇ ರಷ್ಯಾದ ಇಲ್ಯಾ ಇಲೀಚ್ ಮೆಚ್ನಿಕೋವ್ (Ilya Ilich Mechnikov) ಎಂಬ ಮೈಕ್ರೋಬಯಾಲಜಿಸ್ಟ್ ಈ ಪದವನ್ನು ಹುಟ್ಟುಹಾಕಿದ್ದಳಾದರೂ ಕಳೆದ 50 ವರ್ಷಗಳ ಹಿಂದಷ್ಟೇ ಈ ಅಂತರಶಾಸ್ತ್ರೀಯ ಕ್ಷೇತ್ರ ಪ್ರಸಿದ್ಧವಾಗಿದೆ. ವೃದ್ಧರ ಆರೋಗ್ಯ ಆರೈಕೆ, ಬುದ್ಧಿಮಾಂದ್ಯತೆ ಮುಂತಾದ ಕಾಯಿಲೆಗಳಿಗೆ ಸೇವೆ, ದೀರ್ಘಕಾಲೀನ ಚಿಕಿತ್ಸೆಯ ಸಮಸ್ಯೆ, ಸಾಮಾಜಿಕ ನಿರ್ಲಕ್ಷ್ಯ, ಆರ್ಥಿಕ ಮುಗ್ಗಟ್ಟು, ಅವರಿಗೆ ಸಂಬಂಧಿಸಿದ ಕಾನೂನುಗಳು ಮುಂತಾದ ವಿಷಯಗಳನ್ನು ಈ ಶಾಖೆಯು ಒಳಗೊಂಡಿದೆ. ಹೀಗೆ ಜೀವನದ ಎಲ್ಲಾ ಹಂತಗಳಲ್ಲೂ ನಡೆಯುವ ವಿಕಾಸಗಳನ್ನೆಲ್ಲಾ

‘ಜೀವಿತಾವಧಿ ಮನೋವಿಜ್ಞಾನ’ ಎಂದು ಒಂದೇ ಕ್ಷೇತ್ರದ ವಿಷಯವಾಗಿ ಪರಿಗಣಿಸುವುದೂ ಇದೆ.